*M.V.C.No. 609/2023*
*PW: 3*

**ಸಾಕ್ಷಿಯನ್ನು ದಿಃ *06/08/2025* ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಅರ್ಜಿದಾರರ ಪರ ವಕೀಲರಿಂದ.**

ನಾನು ಮುಖ್ಯ ವಿಚಾರಣೆಯಾಗಿ ನನ್ನ ಪ್ರಮಾಣಪತ್ರವನ್ನು ಸಲ್ಲಿಸಿದ್ದೇನೆ. ಅದರಲ್ಲಿನ ಸಂಗತಿಗಳು ಸತ್ಯವಾಗಿವೆ.

ನಾನು ನ್ಯಾಯಾಲಯಕ್ಕೆ ಈ ಕೆಳಗಿನ ದಾಖಲೆಗಳನ್ನು ಹಾಜರುಪಡಿಸುತ್ತಿದ್ದೇನೆ.

| ಅ.ನಂ. | ದಾಖಲೆಗಳು |
|---|---|
| ನಿ.ಪಿ.12 | ಅಂಗನ್ಯೂನತೆ ಪ್ರಮಾಣಪತ್ರ |

***ಪಾಟೀ ಸವಾಲು : ಶ್ರೀ ಎಸಜಿಪಿ ವಕೀಲರಿಂದ 2 ನೇ ಎದುರುದಾರರ ಪರವಾಗಿ.***

ಗಾಯಾಳು ನಮ್ಮ ಹತ್ತಿರ ಮೊದಲನೇ ಬಾರಿ ದಿಃ12-07-2025 ರಂದು ಬಂದಿರುತ್ತಾರೆ. ಈ ರೀತಿ ಅಪಘಾತವಾದ ಎರಡು ವರ್ಷಗಳ ನಂತರ ಅಂಗನ್ಯೂನತೆ ಪ್ರಮಾಣಪತ್ರ ಒದಗಿಸುವ ವಿನಂತಿಯ ಮೇರೆಗೆ ಗಾಯಾಳು ಬಂದಿರುತ್ತಾರೆ ಎಂದರೆ ನಿಜ. ಈ ರೀತಿ ದಿಃ12-07-2025 ರಂದು ಗಾಯಾಳು ನನ್ನ ಹತ್ತಿರ ಬಂದಿಲ್ಲ ಮತ್ತು ನಾನು ಅವರನ್ನು ಪರೀಕ್ಷಿಸಿಲ್ಲ ಎಂದರೆ ಸರಿಯಲ್ಲ. ಅದೇ ದಿವಸ ನಿ.ಪಿ.12 ರಂತೆ ಇರುವ ಅಂಗನ್ಯೂನತೆ ಪ್ರಮಾಣಪತ್ರ ಒದಗಿಸಿ ಮುಂದುವರೆದ ಚಿಕಿತ್ಸೆಯ ಕುರಿತು ಸಲಹೆ ಸೂಚನೆಗಳನ್ನು ನೀಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತವು ದಿಃ25-03-2023 ರಂದು ಆಗಿರುತ್ತದೆ. ಅಪಘಾತವಾದ ಗಾಯಗಳ ಕುರಿತು ಗಾಯಾಳು ಚಿಕಿತ್ಸೆ ಕುರಿತು ಇರುವ ಜೆರಾಕ್ಸ ದಾಖಲಾತಿಗಳು ತೋರಿಸಿದ ನಂತರ ಗೊತ್ತಾಯಿತು ಎಂಬ ಪ್ರಶ್ನೆಗೆ ಸಾಕ್ಷಿದಾರರು ದೈಹೀಕ ತಪಾಸಣೆ ಮಾಡಿ ಸಹ ಗೊತ್ತಾಯಿತು ಎಂದು ಉತ್ತರಿಸುತ್ತಾರೆ. ಸದರಿ ಜೆರಾಕ್ಸ ಪ್ರತಿಗಳು ಬಾಗಲಕೋಟೆ ಜಿಲ್ಲೆಯ ವಾಸನದ ಆಸ್ಪತ್ರೆಯ ದಾಖಲೆಗಳು ಇದ್ದವು. ಸದರಿ ದಾಖಲೆಗಳನ್ನು ನಾನು ಆಸ್ಪತ್ರೆಯ ದಾಖಲಾತಿಗಳೊಂದಿಗೆ ತುಲನೆ ಮಾಡಿ ನೋಡಿಲ್ಲ. ಆದ್ದರಿಂದ ನನ್ನ ಪ್ರಮಾಣಪತ್ರದ 2 ನೇ ಖಂಡಿಕೆಯಲ್ಲಿ ನಮೂದಿಸಿರುವ ತೊಂದರೆಗಳು ತಪ್ಪಾಗಿವೆ ಎಂದರೆ ಸರಿಯಲ್ಲ. ಅದರಂತೆ ಅವರಿಗೆ ಪಿಜಿಯೋಥೆರಪಿ ಮತ್ತು ಔಷದೋಪಚಾರದ ಕುರಿತು ನೀಡಿರುವ ಸಲಹೆಗಳು ಸಹ ಸುಳ್ಳು ಇವೆ ಎಂದರೆ ಸರಿಯಲ್ಲ.

ನನ್ನ ಪ್ರಮಾಣಪತ್ರದ ಮೂರನೇ ಖಂಡಿಕೆಯಲ್ಲಿ ಬರೆದಿರುವ ಗಾಯಾಳುವಿನ ದೈಹೀಕ ತಪಾಸಣೆ ಮತ್ತು ನ್ಯೂನತೆಗಳು ಸುಳ್ಳು ಇದ್ದು ತಪ್ಪಾಗಿ ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ. ಆದ್ದರಿಂದ 70 ಪ್ರತಿಶತ ನ್ಯೂನತೆ ಹೆಚ್ಚಿನ ಪ್ರತಿಶತದ್ದು ಇದ್ದು ಸದರಿ ಸಂಗತಿ ಸಹ ಸುಳ್ಳು ಸಂಗತಿ ಎಂದರೆ ಸರಿಯಲ್ಲ. ಪ್ರತ್ಯೇಕ ಅಂಗದ ನ್ಯೂನತೆಯನ್ನು ಒಟ್ಟು ಶರೀರಕ್ಕೆ ಹೋಲಿಸಿದರೆ 1/3 ನೇ ಅಂಶಕ್ಕೆ ಲೆಕ್ಕಾಚಾರ

ಮಾಡಬೇಕಾಗುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿದಾರರು ನ್ಯೂನತೆ ಪ್ರತಿಶತ ಕಡಿಮೆಯಾಗುತ್ತದೆ, ಇಂತಿಷ್ಟು ಎಂದು ಹೇಳಲು ಬರುವುದಿಲ್ಲ ಎಂದು ಉತ್ತರಿಸುತ್ತಾರೆ. ಗಾಯಾಳುವಿಗೆ ಯಾವ ಕೆಲಸ ಮಾಡುತ್ತಾರೆ ಎಂದು ವಿಚಾರಿಸಿಲ್ಲ ಎಂದರೆ ಸರಿಯಲ್ಲ. ಗಾಯಾಳು ನನಗೆ ಅಂಗನ್ಯೂನತೆ ಪ್ರಮಾಣಪತ್ರವನ್ನು ನೀಡಿ ಅದರ ಮೇಲೆ ನುಡಿ ಸಾಕ್ಷ ನುಡಿಯಲು ಹೇಳಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿದಾರರು ಗಾಯಾಳು ಮತುತ ಅವರ ಪರ ವಕೀಲರು ಬಂದು ಹೇಳಿರುತ್ತಾರೆ ಎಂದು ಉತ್ತರಿಸುತ್ತಾರೆ. ಈ ರೀತಿ ಹೇಳಿಕೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಗಾಯಾಳು ಸಂಪೂರ್ಣ ಗುಣಮುಖವಾಗಿದ್ದು, ಅವರಿಗೆ ಯಾವುದೇ ರೀತಿಯ ಅಂಗನ್ಯೂನತೆ ಇರುವುದಿಲ್ಲ ಎಂದರೆ ಸರಿಯಲ್ಲ. ಹೀಗಿದ್ದರೂ ಸಹ ನಿಯಮಗಳನ್ನು ಮೀರಿ ಅವರಿಗೆ ಹೆಚ್ಚಿನ ಪ್ರಮಾಣದ ಪರಿಹಾರ ಸಿಗಲಿ ಎಂದು ಸುಳ್ಳು ಲೆಕ್ಕಾಚಾರ ಮಾಡಿ ಅಂಗನ್ಯೂನತೆ ಪ್ರಮಾಣಪತ್ರ ನೀಡಿದ್ದು ತಪ್ಪು ಇರುತ್ತದೆ ಎಂದರೆ ಸರಿಯಲ್ಲ.

***ಪಾಟೀ ಸವಾಲು : 1ನೇ ಎದುರುದಾರರ ಪರ ವಕೀಲರು 2ನೇ ಎದುರುದಾರರ ಪರ ವಕೀಲರು ಮಾಡಿರುವ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.***

***ಮರು ವಿಚಾರಣೆ : ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,
ಧಾರವಾಡ